ಅ) ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 151 ಎಲ್‌ಆರ್‌ಎ 95 ದಿನಾಂಕ: 22-11-95 ಮತ್ತು 20-12-95 ರನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಲಾಗಿದೆ. 1:96 ರಿಂದ 1:97 ಅಂತ್ಯದ ವರೆಗೆ 150 ಬೈಠಕುಗಳನ್ನು ನಡೆಸಿ, 13 ಮೂಲ ಪ್ರಕರಣಗಳು ಹಾಗೂ 74 ರಿಮಾಂಡ್ ಆದ ಪ್ರಕರಣಗಳನ್ನು ಇತ್ಯರ್ಥಗೊಳಿಸಿದೆ.

ಆ)

ಬಾಕಿ ಇರುವ ಮೂಲ ಪ್ರಕರಣಗಳು	ಬಾಕಿ ಇರುವ ರಿಮಾಂಡ್ ಆದ ಪ್ರಕರಣಗಳು	ಒಟ್ಟು
268	1813	2081

ಆ) ಉಚ್ಚ ನ್ಯಾಯಾಲಯದಿಂದ ರಿಮ್ಯಾಂಡ್ ಆದ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ತಾಲ್ಲೂಕು ಭೂ ನ್ಯಾಯ ಮಂಡಲಿಗಳಿಗೆ ಅಧಿಕಾರ ಇದೆ. ಪ್ರಾರಂಭದಿಂದ ಜನವರಿ 97ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 9,036 ಪ್ರಕರಣಗಳು ಉಚ್ಚ ನ್ಯಾಯಾಲಯದಿಂದ ರಿಮ್ಯಾಂಡ್ ಆಗಿ ಬಂದಿದ್ದು ಇವುಗಳಲ್ಲಿ 7,223 ಪ್ರಕರಣಗಳನ್ನು ಇತ್ಯರ್ಥಗೊಳಿಸಿದೆ. ಭೂ ನ್ಯಾಯ ಮಂಡಳಿಗಳು ಪ್ರತಿ ತಿಂಗಳು ಗುರಿ ನಿಗಧಿಪಡಿಸಿ ಹೆಚ್ಚಿನ ಬೈಠಕ್‌ಗಳನ್ನು ಜರುಗಿಸಿ, ಪ್ರಕರಣಗಳನ್ನು ತೀರ್ಮಾನಗೊಳಿಸಲು ಸೂಚನೆ ನೀಡಲಾಗುತ್ತದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ರಸ್ತೆ ಅಭಿವೃದ್ಧಿಗೆ ಖರ್ಚು ಮಾಡಿದ ಹಣ

584 (914) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರುಕಟ್ಟೆ ಪ್ರಾಂಗಣಕ್ಕೆ ಸೇರುವ ರಸ್ತೆಗಳ ಕಾಮಗಾರಿಗಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಮಿತಿಯ ವತಿಯಿದ ಸರಕಾರವು ನಿಗದಿಪಡಿಸಿದ ಹಣವನ್ನು ಎಷ್ಟು ಖರ್ಚು ಮಾಡಲಾಗಿದೆ;

ಆ) ಹಾಗಿದ್ದಲ್ಲಿ ಇನ್ನು ಉಳಿದ ಹಣವನ್ನು ಯಾವಾಗ ಖರ್ಚು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇದಕ್ಕಾಗಿ 1995-96ನೇ ಸಾಲಿಗೆ ಒಟ್ಟು ರೂ 210 ಲಕ್ಷಗಳನ್ನು ನಿಗದಿಪಡಿಸಿದ್ದು ಇದರ ಪೈಕಿ 64.23 ಲಕ್ಷರೂಗಳನ್ನು ಜನವರಿ 97ರ ಅಂತ್ಯಕ್ಕೆ ಖರ್ಚು ಮಾಡಲಾಗಿದೆ.

ಅ) ಈ ಜಿಲ್ಲೆಯಲ್ಲಿ ಬಹಳಷ್ಟು ಕಾಮಗಾರಿಗಳು ಪ್ರಗತಿಯಲ್ಲಿದ್ದು ಏಳು ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳಿಗೆ ಉದ್ಧ ನಾಯಾಲಯದಲ್ಲಿ ತಡೆಯಾಜ್ಞೆಯಾಗಿದ್ದು ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವು ಮಾಡಿದ ಕೂಡಲೇ ಉಳಿಕೆ ಹಣವನ್ನು ಖರ್ಚು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಕೆ.ಎಸ್.ಆರ್.ಟಿ.ಸಿ.ಯಲ್ಲಿ ಖಾಲಿ ಇರುವ ಕಂಡಕ್ಟರ್ ಡ್ರೈವರ್ ಹುದ್ದೆಗಳು

585 (515) ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಡ್ರೈವರ್, ಕಂಡಕ್ಟರ್, ಮೆಕ್ಯಾನಿಕ್ ಹುದ್ದೆಗಳೆಷ್ಟು;

ಆ) ಇದನ್ನು ತುಂಬುವ ಇರಾದೆ ಸರ್ಕಾರಕ್ಕಿದೆಯೇ; ಇದ್ದರೆ ಯಾವಾಗ ತುಂಬಲಾಗುವುದು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ ತಾಂತ್ರಿಕ ಹುದ್ದೆಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

ಹುದ್ದೆ	ಮಂಜೂರಾತಿ	ಕಾರ್ಯನಿರ್ವಹಿಸುತ್ತಿರುವವರು	ಖಾಲಿಹುದ್ದೆಗಳು
ನಿರ್ವಾಹಕ	23238	20828	2410
ಚಾಲಕ	24243	21211	3032
ತಾಂತ್ರಿಕ	15665	12768	2897

ಆ) ಮೇಲ್ಕಾಣಿಸಿದ ಖಾಲಿ ಹುದ್ದೆಗಳು ಸಂಸ್ಥೆಯ ಎಲ್ಲಾ ವಿಭಾಗಗಳಲ್ಲಿ ಲಭ್ಯವಿದ್ದು, ಈಗಾಗಲೇ ಎಲ್ಲಾ ವಿಭಾಗಾಧಿಕಾರಿಗಳಿಗೂ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡ 75 ರಷ್ಟು ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆದು ನೇಮಕಾತಿ ಮಾಡಿಕೊಳ್ಳುವಂತೆ ಆದೇಶಿಸಾಗಿದೆ. ಅದರಂತೆ ಎಲ್ಲಾ ವಿಭಾಗಗಳು ಕಾರ್ಯೋನ್ಮುಖವಾಗಿದ್ದು ಇಷ್ಟರಲ್ಲೇ ನೇಮಕಾತಿ ಮುಗಿಸಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳಲಾಗುವುದು.

ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸಮರ್ಪಕ ಓಡಾಟ ಮತ್ತು ನಿರ್ವಹಣೆಯ ಬಗ್ಗೆ

586 (516) ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?